ಎನ್ನುವುದು. ನಿಮ್ಮೆಲ್ಲರನೂ ವಿಶ್ವಾಸಕ್ಕೆ ತೆಗೆದುಕೊಂಡು ನಿಮಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟು, ತಮ್ಮ ತಮ್ಮ ಅಭಿಪ್ರಾಯವನ್ನು ಸಮರ್ಥವಾದ ರೀತಿಯಲ್ಲಿ ಹೇಳಲಿ ಎನ್ನುವುದು ನನ್ನ ಉದ್ದೇಶ. ನೀವು ಏನು ಹೇಳಿದ್ದೀರಿ ಅದನ್ನು ನಾನು ಮನಗಂಡಿದ್ದೇನೆ ಮತ್ತು ನಿಮಗೆ ಈ ಜಡ್ಜಮೆಂಟ್ ಬಗ್ಗೆ ಚರ್ಚೆ ಮಾಡಲಿಕ್ಕೆ ಹಿಂದಿನ ನಿಯಮಾವಳಿ ಪ್ರಕಾರ ನಾನು ಎರಡು ದಿವಸ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರೇ, ನಾನು ಹೇಳಿದ್ದೇನೆ. ಬಿಜಿನೆಸ್ ಅಡ್ವೈಸರಿ ಕಮಿಟಿ ಮಿಾಟಿಂಗ್ ಕರೆದು ನಿಯಮದ ಪ್ರಕಾರ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರು ತೀರ್ಪು ಕೊಟ್ಟಮೇಲೆ ಹೀಗೆ ಹೇಳುವುದು ಸರಿಯಲ್ಲ.

ಶ್ರೀ ಎಂ. ರಘುಪತಿ.—ಬಿಜಿನೆಸ್ ಅಡ್ವೈಸರಿ ಕಮಿಟಿ ಮಿಾಟಿಂಗ್ ಕರೆಯಿರಿ. ಅಲ್ಲಿ ಕಾಲ ನಿರ್ಣಯ ಮಾಡಬಹುದು.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಮಾನ್ಯ ಕೆ. ಎಚ್. ಪಾಟೀಲರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಚರ್ಚೆಗೆ ನಮ್ಮದು ಯಾವುದೇ ವಿರೋಧ ಇಲ್ಲವೆಂದು ಈಗಾಗಲೇ ಸ್ಪಷ್ಟೀಕರಣ ಮಾಡಿದ್ದೇವೆ. ಚರ್ಚೆಯನ್ನು ಒಂದು ದಿನ ಮಾಡಬೇಕೇ, ಎರಡು ದಿನ ಮಾಡಬೇಕೇ ಎಂಬುದು ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡಬೇಕು.

ಅಧ್ಯಕ್ಷರು.— ಶ್ರೀ ಬಂಗಾರಪ್ಪನವರೇ, ಸಾಧ್ಯವಾದರೆ ನಾಳೆ ದಿವಸ ಬಿಜಿನೆಸ್ ಅಡ್ವೈಸರಿ ಕಮಿಟಿ ಮಿಾಟಿಂಗ್ ಕರೆದು ಅದು ನಾಲ್ಕು ತಾಸು ಆಗಬಹುದು ಐದು ತಾಸು ಆಗಬಹುದು, ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ. ಎರಡೂ ಕಡೆಯವರೂ ಇದಕ್ಕೆ ಒಪ್ಪಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ. ನಾವು ಕೂಡ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿದ್ದೇವೆ ಎಲ್ಲರನ್ನೂ ಕರೆಯುತ್ತೇನೆ ಎಂದು ಹೇಳಿ. ಇಲ್ಲದಿದ್ದರೆ ವಿರೋಧಪಕ್ಷದ ನಾಯಕರು ಮತ್ತು ಸಭಾಯಕರು ಇಬ್ಬರನ್ನೂ ಮಾತ್ರ ಕರೆದಿದ್ದೀರಿ ಎಂದು ಅರ್ಥ ಬರುತ್ತದೆ.

ಅಧ್ಯಕ್ಷರು.—ಆಯಿತು ನೀವು ಕೂಡ ಇದ್ದೀರಿ. ನಿಮ್ಮನ್ನೂ ಕೂಡ ಕರೆಯುತ್ತೇನೆ. ಇಲ್ಲಿಗೆ ಈ ವಿಷಯ ಮುಕ್ತಾಯ ಮಾಡೋಣ. ಇನ್ನು ಮುಂದೆ ಪ್ರಶ್ನೋತ್ತರಗಳು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಮೌಕಿಕ ಉತ್ತರಗಳು
ಗುಲಬರ್ಗ ಜಿಲ್ಲೆಯಲ್ಲಿ ಬಾಲವಾಡಿ ಕೇಂದ್ರಗಳು.

೭೪೩. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಬಾಲವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಅಲ್ಲಿನ ಬಾಲವಾಡಿಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರ ಸಂಖ್ಯೆ ಎಷ್ಟು ? ಈಗ ಅವರುಗಳಿಗೆ ನೀಡುತ್ತಿರುವ ಒಟ್ಟು ವೇತನವೆಷ್ಟು ? ಅವರುಗಳು ಯಾವಾಗಿನಿಂದ ಕಾರ್ಯ ನಿರ್ವಹಿಸುತ್ತಿರುವರು ?

ಇ) ಬಾಲವಾಡಿಗಳಲ್ಲಿನ ಉಪಾಧ್ಯಾಯನಿಯರುಗಳನ್ನು ಕಡಿಮೆ ವೇತನಕ್ಕೆ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವಂತೆ ಒತ್ತಾಯಿಸುತ್ತಿರುವುದು ನಿಜವೇ ?

ಈ) ಹಾಗಿದ್ದರೆ ಸರ್ಕಾರದವರು ಈ ಅಂತರವನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಸಮಾಜ ಕಲ್ಯಾಣ ಇಲಾಖೆಯಿಂದ ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವುದೇ ಬಾಲವಾಡಿ ಕೇಂದ್ರಗಳು ಈಗ ಕಾರ್ಯ ನಿರ್ವಹಿಸುತ್ತಿಲ್ಲಾ. ಆದರೆ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಕುಟುಂಬ ಮತ್ತು ಮಕ್ಕಳ ಕಲ್ಯಾಣ ಯೋಜನೆಯಲ್ಲಿ ೭ ಬಾಲವಿಕಾಸ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

ಆ) ೭ ಬಾಲವಿಕಾಸ ಕೇಂದ್ರಗಳಲ್ಲಿ ೭ ಬಾಲ ವಿಕಾಸ ಉಪಾಧ್ಯಾಯರು ಕೆಲಸ ಮಾಡುತ್ತಿರುವರು ಅವರ ವೇತನ ಶ್ರೇಣಿ ರೂ. ೫೫೦—೧೦೫೦ ಮತ್ತು ಇತರೆ ಭತ್ಯೆಗಳು. ೧-೪-೮೦ ರಿಂದ ಬಾಲ ವಿಕಾಸ ಉಪಾಧ್ಯಾಯರು ಕಾರ್ಯ ನಿರ್ವಹಿಸುತ್ತಿರುವರು.

ಇ) ಇಲ್ಲಾ.

ಈ) ಉದ್ಭವಿಸುವುದಿಲ್ಲಾ.

ಶ್ರೀ ಕೆ. ಬಿ. ಶಾನಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಈ ಬಾಲವಾಡಿ ಕೇಂದ್ರಗಳು ಯಾವುದೂ ಇಲ್ಲವೆಂದು ಹೇಳಿದ್ದಾರೆ. ಆದರೆ ಸೇಡಮ್‌ನಲ್ಲಿ ಏಳು ಬಾಲವಾಡಿ ಕೇಂದ್ರಗಳಿವೆ, ಇವು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿರುವುದಾಗಿ ಅವರು ಹೇಳಿದರು.

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿ).—ಬಾಲವಾಡಿ ಕೇಂದ್ರಗಳು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಇಲ್ಲ. ಆದರೆ ತಾಲ್ಲೂಕು ಬೋರ್ಡ್ ವತಿಯಿಂದ ಇವೆ.

ಶ್ರೀ ಕೆ. ಬಿ. ಶಾನಪ್ಪ.—ಆಯಿತ್ರ. ಈಗ ಮಾನ್ಯ ಸಚಿವರು ತಾಲ್ಲೂಕು ಬೋರ್ಡ್ ವತಿಯಿಂದ ಬಾಲವಾಡಿಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ. ಇದನ್ನು ಒಪ್ಪೋಣ. ಈಗ ಸರ್ಕಾರವು ೧೯೮೦ ರಿಂದ ಏಳು ಮಂದಿ ಬಾಲವಿಕಾಶ ಉಪಾಧ್ಯಾಯರು ಕೆಲಸ ಮಾಡುತ್ತಿರುವುದಾಗಿಯೂ ಹೇಳಿದ್ದಾರೆ. ತಾಲ್ಲೂಕು ಬೋರ್ಡ್‌ನಿಂದ ನಡೆಯುತ್ತಿರುವ ಏಳು ಕೇಂದ್ರಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ತೆಗೆದುಕೊಂಡು ಹೋಗುವಾಗ, ಅವರನ್ನು ಅಂಗನವಾಡಿ ಕೇಂದ್ರಗಳಿಗೆ ಅಟ್ಯಾಚ್ ಮಾಡ ಬೇಕೆಂದು ಡಿ. ಸಿ. ಯವರು ಎನ್‌ಫೋರ್ಸ್ ಮಾಡುತ್ತಿದ್ದಾರೆ ಅಂಗನವಾಡಿಯಲ್ಲಿ ಉಪಾಧ್ಯಾಯರಿಗೆ ೧೨೦—೨೦೦ ರೂಪಾಯಿ ಸ್ಕೇಲ್ ಇದೆ. ಆದರೆ ಇವರುಗಳಿಗೆ ಸಿಗುತ್ತಿರುವುದು ಒಂದು ಸಾವಿರ ತನಕ ಸಂಬಳ ಇದೆ. ಇದರ ಬಗ್ಗೆ ಏನು ಹೇಳುತ್ತೀರಿ ?

ಅಧ್ಯಕ್ಷರು.—ಶಾನಪ್ಪನವರೇ, ನೀವು ಭಾಷಣವನ್ನೇ ಶುರುಮಾಡಿಬಿಟ್ಟಿರಲ್ಲ ? ನಿಮಗೆ ಮಂತ್ರಿ ಯವರಿಂದ ಉತ್ತರ ಬೇಕೋ ಬೇಡವೊ ?

ಶ್ರೀ ಕೆ. ಬಿ. ಶಾನಪ .—ಉತ್ತರಬೇಕು ಎಂದೇ ನಾನು ಕೇಳುತ್ತಿರುವುದು ಅಧ್ಯಕ್ಷರೇ, ಇದಕ್ಕೆ ಡಿ. ಸಿ. ಯವರು ಆರ್ಡರ್ ಇಶ್ಯೂ ಮಾಡುತ್ತಿದ್ದಾರೆ, ಇದರ ಬಗ್ಗೆ ಹಿಂದೆ ಶ್ರೀ ಚಂದ್ರಕೀರ್ತಿಯವರು ಇದ್ದಾಗ ಸ್ಟೇ ಕೊಟ್ಟಿದ್ದರು. ಈ ಏಳು ಮಂದಿ ಉಪಾಧ್ಯಾಯರು ಹನ್ನೆರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ,

ಅಧ್ಯಕ್ಷರು.—ಇದಕ್ಕೆ ಉಪ ಪ್ರಶ್ನೆ ಎನ್ನುತ್ತೀರೋ ಹೇಗೆ ? ಉಪ ಪ್ರಶ್ನೆಯನ್ನು ನೇರವಾಗಿ ಕೇಳಿ.

ಶ್ರೀ ಕೆ. ಬಿ. ಶಾಣಪ್ಪ.—ಹಿನ್ನಲೆ ಹೇಳದಿದ್ದರೆ ನನಗೂ ತಿಳಿಯುವುದಿಲ್ಲ. ಅವರಿಗೂ ತಿಳಿಯು ವುದಿಲ್ಲ. ತಾವು ಇದರ ಬಗ್ಗೆ ದಯವಾಡಿ ಒಂದು ವೇಳೆ ತಾಲ್ಲೂಕು ಬೋರ್ಡ್‌ನಿಂದ ನಡೆದರೂ ಸಹ ಡಿ. ಸಿ. ಸ್ಟೇಟಸ್‌ಕೋ ಮೈನ್‌ಟೈನ್ ಮಾಡಿ ತಾವು ಡಿ. ಸಿ. ಡೈರೆಕ್ಷನ್‌ಗೆ ಕಳುಹಿಸುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—ಅಧ್ಯಕ್ಷರೇ, ತಾಲ್ಲೂಕು ಬೋರ್ಡ್‌ನಿಂದ ನಡೆದಂಥ ಬಾಲವಾಡಿ ಕೇಂದ್ರಗಳನ್ನು ಅಂಗನವಾಡಿಯಾಗಿ ತಗೆದುಕೊಳ್ಳಬೇಕೆಂದು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಸೂಚನೆ ಇದೆ. ಅದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ. ಆದರೆ ಈಗಿರುವ ಸೇಡಂ ತಾಲ್ಲೂಕಿನಲ್ಲಿ ಬಾಲವಿಕಾಸ ಕೇಂದ್ರಗಳು ಇವೆ. ನಾವು ಆ

ಶಾಲೆಯಲ್ಲಿ ಅಂಗನವಾಡಿ ಜನರನ್ನು ಹಾಗೂ ಕಾರ್ಯಕರ್ತರನ್ನು ಹಾಕಿ ಈಗಿರುವಂಥ ೨೫೦ ರೂ. ಪೇ ಕೊಡುತ್ತೇವೆ. ಅವರನ್ನು ಬೇರೆ ಕಡೆ ಬದಲಾಯಿಸಿ ಪಗಾರವನ್ನು ನಾವು ಕೊಡುತ್ತಿದ್ದೇವೆ.

ಶ್ರೀ ಕೆ. ಬಿ. ಶಾಣಪ್ಪ.—ಮಂತ್ರಿಗಳಿಗೂ ಕೂಡ ಕನೆವಿನ್ಸ್ ಮಾಡುವುದಕ್ಕೆ ಆಗಿಲ್ಲ. ತಾಲ್ಲೂಕು ಬೋರ್ಡ್‌ನಿಂದ ೮೦ ಸಾವಿರ ರೂಪಾಯಿ ಖರ್ಚು ಮಾಡಿ ಅಂಗನವಾಡಿಯಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತೀರಿ. ತಾವು ತಕ್ಷಣವೇ ಡೈರೆಕ್ಟ್ ಆಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಂಗನವಾಡಿಯಲ್ಲಿ ರುವವರನ್ನು ಅಬ್‌ಸಾರ್ಬ್ ಮಾಡಿ ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಇವರ ಸೂಚನೆಯನ್ನು ನಾನು ಪರಿಶೀಲನೆ ಮಾಡುತ್ತೇನೆ.

ಪಿರಿಯಾಪಟ್ಟಣ ತಾಲ್ಲೂಕಿನ ಅಳಲೂರು ಕೆರೆ ನಿರ್ಮಾಣದ ಕಾಮಗಾರಿ ಕುರಿತು.

೬೩೩. ಶ್ರೀ ಕೆ. ವೆಂಕಟೇಶ್ (ಪಿರಿಯಾಪಟ್ಟಣ).— ಮಾನ್ಯ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೇ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಅಳಲೂರು ಕೆರೆ ನಿರ್ಮಾಣದ ಕಾಮಗಾರಿಯು ಪೂರ್ಣ ಗೊಂಡಿದೆಯೇ?

ಆ) ಹಾಗಿದಲ್ಲಿ ಅದಕ್ಕೆ ವೆಚ್ಚವಾಗಿರುವ ಹಣವೆಷ್ಟು? ಹಾಗೂ ಇದರಿಂದ ನೀರಾವರಿಗೆ ಒಳಪಡುವ ಭೂಮಿ ಎಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ೪೪.೨೯ ಲಕ್ಷ ರೂಪಾಯಿಗಳು. ೫೪೩ ಹೆಕ್ಟೇರುಗಳು.

ಶ್ರೀ ಕೆ. ವೆಂಕಟೇಶ್.—ಈ ಕೆರೆಯ ನಿರ್ಮಾಣ ಪೂರ್ತಿ ಯಾವಾಗ ಆಗುತ್ತದೆ? ಎಷ್ಟು ಎಕರೆ ನೀರಾವರಿಗೆ ಒಳಪಡುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.— ಕೆರೆ ಕೆಲಸ ಶುರುವಾದದ್ದು ೧೯೭೭ರಲ್ಲಿ. ಇದಕ್ಕೆ ಕಾರಣ ವೇನೆಂದು ಹೇಳಿದರೆ ಫಾರೆಸ್ಟ್ ಲ್ಯಾಂಡ್ ತೆಗೆದುಕೊಳ್ಳತಕ್ಕಂಥ ವಿಷಯದಲ್ಲಿ ಸ್ವಲ್ಪ ತಕರಾರು ಆಗಿದೆ. ಇದು ಪೂರ್ತಿ ಕೆನಾಲ್ ಸಿಸ್ಟಂ ಮಾಡಲಿಕ್ಕೆ ಆಗಿಲ್ಲ. ಆದ್ದರಿಂದ ಇದರ ಉಪಯೋಗ ಪಡೆದುಕೊಳ್ಳು ವುದಕ್ಕೆ ಆಗಿಲ್ಲ. ಇದು ಇರತಕ್ಕಂಥ ವಾಸ್ತವಾಂಶ.

ಶ್ರೀ ಕೆ. ವೆಂಕಟೇಶ್.— ಈ ಜಮೀನು ಅರಣ್ಯ ಇಲಾಖೆಯಿಂದ ಯಾವಾಗ ಬಿಡುಗಡೆ ಆಗುತ್ತದೆ?

ಶ್ರೀ ಹೆಚ್.ಡಿ. ದೇವೇಗೌಡ.— ನಾವು ಈಗಾಗಲೇ ಅರಣ್ಯ ಇಲಾಖೆಯ ಜೊತೆ ಸಮಾಲೋಚನೆ ಮಾಡುತ್ತಿದ್ದೇವೆ..೪೪ ಲಕ್ಷ ರೂಪಾಯಿ ಖರ್ಚು ಮಾಡಿರುವುದರಿಂದ ಹಿಂದೆ ಸರಿಯಲು ಸಾಧ್ಯವಿಲ್ಲ. ಫಾರೆಸ್ಟ್ ಲ್ಯಾಂಡನ್ನು ಸರ್ಕಾರ ಬಿಡುಗಡೆ ಮಾಡಲು ಪ್ರಯತ್ನ ಮಾಡುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಖರ್ಚು ಮಾಡಿರುವ ಹಣದಿಂದ ಫಲ ಸಿಗುತ್ತದೆ. ಅದನ್ನು ಮುಂದುವರಿಸಿ ಮುಗಿಸುತ್ತೇವೆ.

ಕರ್ನಾಟಕ ಅರಣ್ಯ ಕಾಯಿದೆ

೬೫೭. ಶ್ರೀ ಜಿ.ಎಸ್. ಆಚಾರ್ (ಬೈಂದೂರು),— ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಅರಣ್ಯ ಕಾಯಿದೆಯನ್ವಯ ಅರಣ್ಯ ತಕ್ಷಿರನಲ್ಲಿ ಒಳಗೊಂಡ ವಾಹನಗಳಿಗೆ ರೂ. ೫೦೦೦ ಗರಿಷ್ಟ ದಂಡ ವಿಧಿಸಬಹುದೆಂದಿದ್ದರೂ. ಚಿಕ್ಕಪುಟ್ಟ ತಕ್ಷೀರುಗಳಿಗೂ ಸಹ ಗರಿಷ್ಠ ದಂಡವನ್ನೇ ವಿಧಿಸಬೇಕೆಂಬ ಆಜ್ಞೆ ನ್ಯಾಯವಾದುದೆಂದು ಸರ್ಕಾರದವರು ಭಾವಿಸುತ್ತಾರೆಯೇ?